ಯಾಕೆಂದರೆ ಸರಕಾರ ಒಬ್ಬರಿಂದೊಬ್ಬರು ಆರು ಅಡಿಗಳ ದೂರದಲ್ಲಿರಬೇಕೆಂದು ಆಜ್ಞೆ ಮಾಡಿದೆ. ಅದರಿಂದಾಗಿ ಸಂತತಿ ಬೆಳೆಯುವುದು ನಿಲ್ಲುತ್ತದೆ. ಮನುಷ್ಯ ವರ್ಗವೇ ನಶಿಸಿ ಹೋಗಬಹುದು. ಶಾಲೆಗಳನ್ನೂ ಮುಚ್ಚಿರುವುದರಿಂದ ನಮ್ಮ ಸಂಸ್ಕೃತಿಯೂ ಹಾಳಾಗಿ ಹೋಗಬಹುದು. ಮಾಲ್‌ಗಳು ಕೂಡಾ ಬಂದಾಗಿದ್ದಾವೆ. ರಸ್ತೆ ಬದಿಯ ತರಕಾರಿ ವ್ಯಾಪಾರಿಗಳಿಗಾಗಲೀ ಮಾಂಸದ ಅಂಗಡಿಗಳಿಗಾಗಲೀ ವ್ಯಾಪಾರವಿಲ್ಲ. ಇದರಿಂದ ನಮ್ಮ ಆಹಾರ ಪದ್ಧತಿಯಲ್ಲಿ ಬದಲಾವಣೆಗಳಾಗಿ ರೋಗವಿಲ್ಲದಿದ್ದರೂ ನಾವೆಲ್ಲ ಸಾಯಬಹುದು" ಎಂದ.

ಸಾವನ್ನು ಎದುರು ನೋಡುತ್ತಿರುವ ನಮಗೆ ಅವನು ಹೇಳುವ ಕತೆ ಕೇಳುವುದರಲ್ಲಿ ಆಸಕ್ತಿ ಇರಲಿಲ್ಲ. ಬದುಕಿದ್ದಾಗಲೇ ಕತೆ ಓದುವ ಹುಚ್ಚಿಲ್ಲದ ನಮಗೆ ಇಂಥ ಸಮಯದಲ್ಲಿ ಯಾರಿಗೆ ಆಸಕ್ತಿ ಹುಟ್ಟುತ್ತದೆ? ಆದರೆ ಅವನು ಕತೆ ಹೇಳುವುದನ್ನು ಆರಂಭಿಸಿಯೇ ಬಿಟ್ಟ. "ಒಂದೂರಿನಲ್ಲಿ..." ಎಂದು ಹೇಳಿ ಅವನು ದೀರ್ಘವಾದ ಒಂದು ಯಯಯಯಯಯಯಸ್ ಕೊಟ್ಟ. ಅವನು ಆ ರೀತಿ ಕತೆ ಹೇಳಲು ಶುರುಮಾಡಿ ನಿಲ್ಲಿಸದಿದ್ದಲ್ಲಿ ನಾವು ಅವನ ಕತೆಯನ್ನು ಕೇಳುತ್ತಿರಲಿಲ್ಲವೇನೊ! ಆದರೆ ಅವನು ನಿಲ್ಲಿಸಿದ್ದೇ ನಾವು ಆತ ಮುಂದೇನು ಹೇಳಬಹುದು ಎಂದು ಕಿವಿ ನಿಮಿರಿಸಿ ಕಾದುಕೂತೆವು. ಅವನು ಕತೆ ಮುಂದುವರಿಸಿದ. ಅದೇನೂ ಅಂಥ ರಸವತ್ತಾದ, ಕುತೂಹಲ ಕೆರಳಿಸುವ ಕತೆಯಲ್ಲ. ಬರೇ ಕಾಗಕ್ಕ ಗುಬ್ಬಕ್ಕ ಕತೆಯೆಂದು ಉಪೇಕ್ಷೆ ಮಾಡಿದೆವು. ಸಮಯದ ಅಭಾವದಿಂದಾಗಿ ಆ ದಿನ ನಮಗೆ ಡಾಕ್ಟರರನ್ನು ಕಾಣುವುದು ಸಾಧ್ಯವಾಗದೇ ಮನೆಗೆ ಮರಳಿದೆವು.

ಆದರೆ ಸಾವಿನ ಭೀತಿ ಅಷ್ಟು ಬೇಗ ನಮ್ಮನ್ನು ಬಿಟ್ಟು ಹೋಗುತ್ತದೆಯೇ? ರಾತ್ರಿ ಇಡೀ ನಿದ್ರೆ ಇಲ್ಲದೇ ತೊಳಲಿದ ನಾವು ಮರುದಿನ ಮತ್ತೆ ಡಾಕ್ಟರರ ಪ್ರತೀಕ್ಷಾ ಕಕ್ಷಕ್ಕೆ ಹೋದಾಗ ಆತ ಅದೇ ಜಾಗದಲ್ಲಿ ಗೋಡೆಗೊರಗಿ ನಿಂತಿದ್ದ. ಪ್ರತೀಕ್ಷಾ ಕಕ್ಷ ತುಂಬಿದ ಮೇಲೆ ಆತ, "ಇಂದು ನಾನೊಂದು ಕವಿತೆ ಓದುತ್ತೇನೆ." ಎಂದು ಹೇಳಿ ದೀರ್ಘವಾಗಿ ಕವನ ಓದಿದ. ಕೂತ ಜನರಲ್ಲಿ ಯಾರಿಗೂ ಕವನ ಓದುವ ಅಥವಾ ಕೇಳುವ ಅಭ್ಯಾಸವಿರಲಿಲ್ಲ. ಕುರ್ಚಿಯ ಮೇಲೆ ಕೂತ ಒಬ್ಬಾತ ದಿನಪತ್ರಿಕೆಯನ್ನು ತೆರೆದು ಓದತೊಡಗಿದ. ಹತ್ತಿರ ಕೂತ ಇಬ್ಬರು ಮೂವರು ಅದರಲ್ಲಿ ತಮ್ಮ ತಲೆ ತೂರಿಸಿದರು. ಇದನ್ನವನು ಗಮನಿಸಿರಬೇಕು. ಕವನ ಓದುವುದನ್ನು ನಿಲ್ಲಿಸಿ ಅವನು, "ನಾವು ಈಗ ಶಬ್ದಬಂಡಿ ಆಟ ಆಡುವ. ನಾನು ಒಂದು ಶಬ್ದ ಹೇಳುತ್ತೇನೆ. ಅದರ ಕೊನೆಯ ಅಕ್ಷರದಿಂದ ಶುರುಮಾಡಿ ಇನ್ನೊಂದು ಶಬ್ದವನ್ನು ಹೇಳಬೇಕು." ಎಂದ. ಹಾಗೂ ಅ ದಿಂದ ಶುರುಮಾಡಬೇಕೆಂದು ಅವನು "ಅಜ್ಞಾನ" ಎಂದು ಎತ್ತರದ ಸ್ವರದಲ್ಲಿ ಹೇಳಿದ.

ಶಬ್ದಬಂಡಿ ಆಟವನ್ನು ನಾವೆಲ್ಲ ಚಿಕ್ಕಂದಿನಲ್ಲಿ ಆಡುತ್ತಿದ್ದೆವು. ಅದು ನಮ್ಮ ಶಬ್ದ ಭಂಡಾರವನ್ನು ವೃದ್ಧಿಸುತ್ತದೆ ಎಂದು ನಮ್ಮ ಹಿರಿಯರು ಹೇಳುತ್ತಿದ್ದರಷ್ಟೇ ಅಲ್ಲ, ಶಾಲೆಯಲ್ಲಿ ಅಧ್ಯಾಪಕರೂ ಅದಕ್ಕೆ ಉತ್ತೇಜನ ಕೊಡುತ್ತಿದ್ದರು. ಅದರ ನೆನಪು ಬಂದು ನಮಗೆಲ್ಲ ಉತ್ಸಾಹ ಮೂಡಿತು. ಅವನ ಪಕ್ಕದಲ್ಲಿದ್ದವನು ಒಮ್ಮೆಲೇ ಮಾಸ್ಕ್ ಸರಿಸಿ, "ನಕ್ಷತ್ರ" ಎಂದು ಹೇಳಿ, ಮತ್ತೆ ಮಾಸ್ಕ್‌ನಿಂದ ಮುಖ ಮುಚ್ಚಿ, ತ್ರ ದಿಂದ ಆರಂಭವಾಗುವ ಶಬ್ದವನ್ನು ಹುಡುಕುವುದು ಕಷ್ಟ ಎಂದು ಹೆಮ್ಮೆಯಿಂದ ಪಕ್ಕದವನ ಮುಖ ನೋಡಿದ. ಆದರೆ ಶಬ್ದಬಂಡಿ ಮುಂದುವರೆಯಿತು. ಆ ದಿನ ಡಾಕ್ಟರರ ಮನೆಯಲ್ಲಿ ಅವರ ಎಂದೋ ತೀರಿಕೊಂಡ ಅಪ್ಪನ ಶ್ರಾದ್ಧವಿತ್ತೆಂದು ಅವರು ಕ್ಲಿನಿಕ್ಕಿಗೆ ಬರುವುದಿಲ್ಲ ಎಂದು ನಮಗೆ ಆ ಮೇಲೆ ತಿಳಿಯಿತು. ಮೂರನೆಯ ದಿನ ನಾವೆಲ್ಲ ಡಾಕ್ಟರರಿಗಿಂತ ಆ ವ್ಯಕ್ತಿಯನ್ನು ಕಾಣುವ ಉತ್ಸಾಹದಲ್ಲಿಯೆ ಆಸ್ಪತ್ರೆಗೆ ಹೋದೆವು. ಇಂದು ಆತ ಯಾವ ಆಟ ಆಡಬಹುದು ಎಂಬ ಯೋಚನೆಯೇ ನಮ್ಮನ್ನು ಆವರಿಸಿತ್ತೆನ್ನಬೇಕು. ಅವನು ಬರುವುದು ಸ್ವಲ್ಪ ತಡವಾಯಿತು. ನಾವೆಲ್ಲ ಉತ್ಕಂಠತೆಯಿಂದ